ಚಾಮುಂಡೇಶ್ವರಿ ವಿದ್ಯುತ್‌ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಅಧೀಕ್ಷಕ ಇಂಜಿನಿಯರ್ (ವಿ), ರವರಕಛೇರಿ,
ಕಾ ಮತ್ತು ಪಾ ವೃತ್ತ, ಚಾ.ನಗರ – ಕೊಡಗು,
ಶ್ರೀ ಹರ್ಷರಸ್ತೆ, ಮೈಸೂರು.
ದೂರವಾಣಿ: 0821–2420850

CHAMUNDESHWARI ELECTRICITY SUPPLY CORPORATION LIMITED
*(A Government of Karnataka Undertaking)*
O&M Circle, Chamarajanagar-Kodagu,
MPL Compound, Sri Harsha Road,
Mysuru-570001.
Web site: www.cescmysore.org
E-mail ID: seechnkodagu@cescmysore.org

**Company Identity Number (CIN):U40109KA2004SGC035177**

ಸಂಖ್ಯೆ: ಅಇಂ(ವಿ)/ಕಾನಿಇಂ/ಸಕಾನಿಇಂ/ಕ–127/2023–24/ CYS- 55 ದಿನಾಂಕ: 31 JUL 2023

## –: ಸಭೆಯ ನಡಾವಳಿಗಳು :–

ದಿನಾಂಕ:13.06.2023 ಮಂಗಳವಾರದಂದು ಚಾಮರಾಜನಗರ ಉಪವಿಭಾಗದ ಕಛೇರಿಯಲ್ಲಿ ಅಧೀಕ್ಷಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ ವೃತ್ತ, ಚಾ.ವಿ.ಸ.ನಿ.ನಿ, ಚಾಮರಾಜನಗರ–ಕೊಡಗು ರವರ ಅಧ್ಯಕ್ಷತೆಯಲ್ಲಿ ನಡೆದ ಜನಸಂಪರ್ಕ ಸಭೆಯ ನಡಾವಳಿಗಳು.

**ಸಭೆಯಲ್ಲಿ ಹಾಜರಿದ್ದವರು:–**

1. ಶ್ರೀ ಸೋಮರಾಜು ಎಲ್. ಬಿ : ಅ.ಇಂ(ವಿ), ಕಾ ಮತ್ತು ಪಾ ವೃತ್ತ, ಚಾವಿಸನಿನಿ, ಚಾ.ನಗರ–ಕೊಡಗು
2. ಶ್ರೀ. ವಸಂತಕುಮಾರ್ ಆರ್ : ಕಾ.ನಿ.ಇಂ(ವಿ),ಚಾಮರಾಜನಗರ ವಿಭಾಗ
3. ಶ್ರೀ ರಾಜು ಎಂ : ಸ.ಕಾ.ನಿ.ಇಂ(ವಿ), ಚಾಮರಾಜನಗರ ಉಪವಿಭಾಗ
4. ಶ್ರೀ ಸಿ.ಎಸ್.ಪ್ರವೀಣ್ : ಸ.ಇಂ(ವಿ), ನಗರ ಶಾಖೆ
5. ಶ್ರೀ. ಪ್ರವೀಣ್ ಕೆ.ಬಿ : ಪ್ರ.ಸ.ಇಂ(ತಾ), ತಾಂತ್ರಿಕ ಶಾಖೆ
6. ಶ್ರೀ. ಮಂಜುನಾಥ ಹೆಚ್.ಟಿ : ಪ್ರ.ಸ.ಲೆ(ಕಂ) , ಚಾಮರಾಜನಗರ ಉಪವಿಭಾಗ
7. ಶ್ರೀ ಮಂಜುನಾಥ : ಕಿ.ಇಂ(ವಿ), ರಾಮಸಮುದ್ರ ಶಾಖೆ
8. ಶ್ರೀ ಚಂದ್ರನಾಯ್ಕ್ : ಕಿ.ಇಂ(ವಿ), ಮಾದಾಪುರ ಶಾಖೆ
9. ಶ್ರೀ ಮಹದೇವಸ್ವಾಮಿ ಕೆ.ಎಂ : ಕಿ.ಇಂ(ವಿ), ಬದನಗುಪ್ಪೆ ಶಾಖೆ

ಸಭೆಯಲ್ಲಿ ಚಾಮರಾಜನಗರ ಉಪವಿಭಾಗಕ್ಕೆ ಸಂಬಂಧಿಸಿದಂತೆ ಬಂದ ದೂರುಗಳು ಹಾಗೂ ತೆಗೆದುಕೊಂಡ ಕ್ರಮಗಳು ಈ ಕೆಳಗಿನಂತಿರುತ್ತವೆ.

| ಕ್ರ. ಸಂ | ಗ್ರಾಹಕರ ಹೆಸರು ಮತ್ತು ವಿಳಾಸ | ದೂರು | ಅನುಸರಣೆ |
|---|---|---|---|
| 1 | ಶ್ರೀ ಮಹದೇವಸ್ವಾಮಿ ಟಿ.ಎಸ್. ಚಾಮರಾಜನಗರ | * ತಾತ್ಕಾಲಿಕ ಸ್ಥಾವರದ ಸಂಪರ್ಕದ PCC ಹಣವು ಎರಡು ಪಟ್ಟು ಹೆಚ್ಚಾಗಿರುತ್ತದೆ. ಸದರಿ ಮೊತ್ತವನ್ನು ಕಡಿಮೆ ಮಾಡಲು ಕೋರಿರುತ್ತಾರೆ. | * ಅಧೀಕ್ಷಕ ಇಂಜಿನಿಯರ್(ವಿ) ರವರು ಕೆ.ಇ.ಆರ್.ಸಿ ಆದೇಶದ ಪ್ರಕಾರ 60 ದಿನಗಳಿಗಿಂತ ಹೆಚ್ಚು ದಿನ ತಾತ್ಕಾಲಿಕ ವಿದ್ಯುತ್ ಸಂಪರ್ಕಕ್ಕೆ ಪ್ರತಿ ಕೆ.ವ್ಯಾ 2 ಪಟ್ಟು ಹಣ ಪಾವತಿಸಬೇಕಾಗಿರುತ್ತದೆ ಹಾಗೂ ಸದರಿ ಮೊತ್ತವು ಗ್ರಾಹಕರ ಖಾತೆಯಲ್ಲಿಯೇ ಇರುತ್ತದೆ ಎಂದು ತಿಳಿಸಿರುತ್ತಾರೆ. |
| 2 | ಶ್ರೀ. ಪ್ರಸಾದ, ಮಲ್ಲಯ್ಯನಪುರ ಗ್ರಾಮ | * ಜನ ಸಂಪರ್ಕ ಸಭೆಯನ್ನು 5 ದಿನ ಮೊದಲಿನಿಂದ ಜನರಿಗೆ ತಿಳಿಸಲು ಕೋರಿರುತ್ತಾರೆ. | * ಅಧೀಕ್ಷಕ ಇಂಜಿನಿಯರ್(ವಿ) ರವರು ಸದರಿ ವಿಷಯದ ಬಗ್ಗೆ 2 ದಿನ ಪತ್ರಿಕಾ ಪ್ರಕಟಣೆ ನೀಡಲು & ಜನರಿಗೆ ಜಾಗೃತಿ ಮೂಡಿಸಲು ಶಾಖಾಧಿಕಾರಿಗಳಿಗೆ ಸೂಚಿಸಲಾಯಿತು. |
| 3 | ಶ್ರೀ. ಪ್ರಸಾದ, ಮಲ್ಲಯ್ಯನಪುರ ಗ್ರಾಮ | * ಮಲ್ಲಯ್ಯನಪುರ ಗ್ರಾಮದ ಟಿ.ಸಿಗೆ ಎಲ್.ಟಿ. ಕಿಟ್ ಅಳವಡಿಸಲು ಕೋರಿರುತ್ತಾರೆ. | * ಅಧೀಕ್ಷಕ ಇಂಜಿನಿಯರ್(ವಿ) ರವರು ಬದನಗುಪ್ಪೆ ಶಾಖಾಧಿಕಾರಿಗಳಿಗೆ 2 ದಿನದೊಳಗಾಗಿ ಎಲ್.ಟಿ. ಕಿಟ್ ಅಳವಡಿಸಲು ಸೂಚಿಸಲಾಯಿತು. |

| | | | |
|---|---|---|---|
| 4 | ಶ್ರೀ. ಸುರೇಶ್, ಅಧ್ಯಕ್ಷರು, ಸುವರ್ಣ ಕರ್ನಾಟಕ ವೇದಿಕೆ. ಚಾಮರಾಜನಗರ | * 16ನೇ ವಾರ್ಡ್‌ಗೆ ನಿರಂತರವಾಗಿ ವಿದ್ಯುತ್ ಪೂರೈಸಲು ಕೋರಿರುತ್ತಾರೆ. | * ಅಧೀಕ್ಷಕ ಇಂಜಿನಿಯರ್(ವಿ) ರವರು ನಗರ ಶಾಖೆಯ ಶಾಖಾಧಿಕಾರಿಗಳಿಗೆ 7 ದಿನದೊಳಗಾಗಿ ಲಿಂಕ್ ಲೈನ ಕಾಮಗಾರಿ ನಿರ್ವಹಿಸಿ 16 ನೇ ವಾರ್ಡ್‌ನ ವಿದ್ಯುತ ಸಂಪರ್ಕವನ್ನು ಚಾ.ನಗರ ಫೀಡರ್‌ನ ಮೇ ವರ್ಗಾಯಿಸಲು ಸೂಚಿಸಲಾಯಿತು. |
| 5 | ಶ್ರೀ. ಸುರೇಶ್, ಅಧ್ಯಕ್ಷರು, ಸುವರ್ಣ ಕರ್ನಾಟಕ ವೇದಿಕೆ. ಚಾಮರಾಜನಗರ | * ಜೂನ್ ತಿಂಗಳ ವಿದ್ಯುತ್ ಬಿಲ್ಲಿನ ಮೊತ್ತವು ಹೆಚ್ಚಾಗಿರುತ್ತದೆ ಎಂದು ಕೋರಿರುತ್ತಾರೆ. | * ಅಧೀಕ್ಷಕ ಇಂಜಿನಿಯರ್(ವಿ) ರವರು ಕೆ.ಇ.ಆರ್.ಸಿ ಆದೇಶದ ಪ್ರಕಾರ ವಿದ್ಯುತ್ ಬಿಲ್‌ನ ಮೊತ್ತವು ಜೂನ್ ತಿಂಗಳಲ್ಲಿ ಹೆಚ್ಚಾಗಿರುತ್ತದೆ. |
| 6 | ಶ್ರೀ.ಆಡೂರು ಮಂಜುನಾಥ, ಜಿಲ್ಲಾ ಅಧ್ಯಕ್ಷರು, ಸುವರ್ಣ ಕರ್ನಾಟಕ ವೇದಿಕೆ. ಚಾಮರಾಜನಗರ | *ಮಳೆಗಾಲಕ್ಕೆ ಮೊದಲೇ ಮರ ಗಿಡಗಳ ಕೊಂಬೆಗಳನ್ನು ತೆರವುಗೊಳಸಲು ಕೋರಿರುತ್ತಾರೆ. | * ಅಧೀಕ್ಷಕ ಇಂಜಿನಿಯರ್(ವಿ) ರವರು ಶಾಖಾಧಿಕಾರಿಗಳಿಗೆ ಪ್ರತಿ ಮಾಹೆ ಫೀಡರ್ ನಿರ್ವಹಣೆಯನ್ನು ಸಮರ್ಪಕವಾಗಿ ನೆಡೆಸಲು ಮೊದಲೇ ಸೂಚಿಸಲಾಯಿತು. |
| 7 | ಶ್ರೀ.ಆಡೂರು ಮಂಜುನಾಥ, ಜಿಲ್ಲಾ ಅಧ್ಯಕ್ಷರು, ಸುವರ್ಣ ಕರ್ನಾಟಕ ವೇದಿಕೆ. ಚಾಮರಾಜನಗರ | *ವಿದ್ಯುತ್ ಸಂಪರ್ಕ ನಿಲುಗಡೆಗೂ ಮೊದಲು ನೋಟಿಸ್ ನೀಡಲು ಕೋರಿರುತ್ತಾರೆ. | * ಅಧೀಕ್ಷಕ ಇಂಜಿನಿಯರ್(ವಿ) ರವರು ವಿದ್ಯುತ್ ಬಿಲ್ಲನ್ನು ಪಾವತಿ ಮಾಡಲು 15 ದಿನಗಳ ಕಾಲಾವಕಾಶವಿರುತ್ತದೆ. ವಿದ್ಯುತ್ ಸಂಪರ್ಕ ನಿಲುಗಡೆಗೂ ವಿದ್ಯುತ್ ಬಿಲ್ಲನ್ನೇ ನೋಟೀಸ್ ಎಂದು ಬಿಲ್ಲಿನ ಹಿಂಭಾಗದಲ್ಲಿರುತ್ತದೆ ಎಂದು ತಿಳಿಸಿರುತ್ತಾರೆ. |
| 8 | ಶ್ರೀ.ಗೋವಿಂದಯ್ಯ, ವಾರ್ಡ ನಂ. 10, ಚಾಮರಾಜನಗರ | * ಡ್ರೈವರ್ ಲೇಔಟ್‌ಗೆ ಶಾಶ್ವತ ವಿದ್ಯುತ್ ಸಂಪರ್ಕ ನೀಡಲು ಕೋರಿರುತ್ತಾರೆ. | * ಅಧೀಕ್ಷಕ ಇಂಜಿನಿಯರ್(ವಿ) ರವರು ಸ್ವಯಂ ಕಾರ್ಯ ನಿರ್ವಹಣಾ ಯೋಜನೆಯಡಿ ಅಂದಾಜು ಪಟ್ಟಿ ಸಲ್ಲಿಸಲು ರಾಮಸಮುದ್ರ ಶಾಖಾಧಿಕಾರಿಗಳಿಗೆ ಸೂಚಿಸಿದರು. |
| 9 | ಗುತ್ತಿಗೆದಾರರು ಚಾಮರಾಜನಗರ. | * ಗೃಹಜ್ಯೋತಿ ಯೋಜನೆಯ ನೋಂದಣಿ ಬಗ್ಗೆ ಮಾಹಿತಿಯನ್ನು ಕೋರಿದರು. | * ಅಧೀಕ್ಷಕ ಇಂಜಿನಿಯರ್(ವಿ) ರವರು ಗೃಹಜ್ಯೋತಿ ಯೋಜನೆಯ ನೋಂದಣಿ ಬಗ್ಗೆ ಸದರಿ ರವರಿಗಿದ್ದ ಗೊಂದಲಗಳಿಗೆ ಹಾಗೂ ಅಗತ್ಯವಿರುವ ದಾಖಲಾತಿಗಳ ಬಗ್ಗೆ ಮಾಹಿತಿಯನ್ನು ಸವಿವರವಾಗಿ ವಿವರಿಸಿ ತಿಳಿಸಿದರು. ಮುಂದುವರೆದು ಗೃಹಜ್ಯೋತಿ ಯೋಜನೆಯ ನೋಂದಣಿಯನ್ನು ಉಪ-ವಿಭಾಗ ಕಛೇರಿಯಲ್ಲಿ 2 ಕೌಂಟರ್‌ಗಳನ್ನು, ಶಾಖಾ ಕಛೇರಿಗಳಲ್ಲಿ 1 ಕೌಂಟರ್‌ಗಳನ್ನು ದಿನಾಂಕ:18.06.2023 ರಿಂದ ತೆರೆಯಲಿದ್ದು, ಗ್ರಾಹಕರು ಅರ್ಜಿಯನ್ನು ನೋಂದಾಯಿಸಬಹುದಾಗಿರುತ್ತದೆ ಎಂದು ತಿಳಿಸಿದರು. ಸೇವಾಸಿಂಧು ಪೋರ್ಟಲ್, ಕರ್ನಾಟಕ-1, ಗ್ರಾಮ-1 ಸೇವಾ ಕೇಂದ್ರಗಳಲ್ಲೂ ಅರ್ಜಿ ಸಲ್ಲಿಸಬಹುದಾಗಿದೆ ಎಂದು ತಿಳಿಸಿದರು |
| 10 | ಶ್ರೀ.ದೊರೆರಾಜ್, ಪಣ್ಯದಹುಂಡಿ, ಚಾಮರಾಜನಗರ | * ಜಮೀನಿನ ಮಧ್ಯದಲ್ಲಿ ಹಾದು ಹೋಗಿರುವ ಕಂಭಗಳನ್ನು ಸ್ಥಳಾಂತರಿಸಲು ಕೋರಿರುತ್ತಾರೆ | * ಅಧೀಕ್ಷಕ ಇಂಜಿನಿಯರ್(ವಿ) ರವರು ಸ್ವಯಂ ಕಾರ್ಯ ನಿರ್ವಹಣಾ ಯೋಜನೆಯಡಿ ಅಂದಾಜು ಪಟ್ಟಿ ಸಲ್ಲಿಸಲು ಬದನಗುಪ್ಪೆ ಶಾಖಾಧಿಕಾರಿಗಳಿಗೆ ಸೂಚಿಸಿದರು. |

ತಮ್ಮ ವಿಶ್ವಾಸಿ,

ಅಧೀಕ್ಷಕ ಇಂಜಿನಿಯರ್(ವಿ),
ಚಾ.ವಿ.ಸ.ನಿ.ನಿ, ಕಾ ಮತ್ತು ಪಾ ವೃತ್ತ,
ಚಾಮರಾಜನಗರ ಮತ್ತು ಕೊಡಗು.

ಪ್ರತಿಯನ್ನು:-

1. ಮುಖ್ಯ ಇಂಜಿನಿಯರ್(ವಿ), ಚಾವಿಸನಿನಿ., ವಲಯ ಕಛೇರಿ, ಮೈಸೂರು ರವರಿಗೆ ಸಲ್ಲಿಸಲಾಗಿದೆ.
2. ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ), ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
3. ವ್ಯವಸ್ಥಾಪಕ ನಿರ್ದೇಶಕರ ಕಾರ್ಯನಿವಾಹಕ ಸಹಾಯಕರು, ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
4. ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಚಾವಿಸನಿನಿ, ಕಾ ಮತ್ತು ಪಾ ವಿಭಾಗ, ಚಾಮರಾಜನಗರ ರವರಿಗೆ ಮಾಹಿತಿಗಾಗಿ.
5. ನಿರ್ದೇಶಕರು(ತಾಂತ್ರಿಕ) ರವರ ತಾಂತ್ರಿಕ ಸಹಾಯಕರು, ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
6. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಚಾ.ವಿ.ಸ.ನಿ.ನಿ., ಚಾಮರಾಜನಗರ ಉಪವಿಭಾಗ ರವರ ಮಾಹಿತಿಗಾಗಿ.
7. ಹಿಆಸ/ಪ್ರಕ/ಕಡತ.